'ಅಕ್ಕ, ನಾನು, ಬಾಗಿಲ ತೆರೆ' ಎಂಬ ಮಾತು ಆಗಾಗ್ಗೆ ಕಿಡಕಿ ಸಂದಿನೊಳಗಿಂದ ತೂರಿ ಬಂದು ಕಿವಿಯನ್ನೇ ಕೊರೆಯುವಂತೆನಿಸಿತು. ಆದರೆ ಅದೆಲ್ಲ ಎಚ್ಚರ ತಪ್ಪದ ಅವಳಿಗೆ ಗೊತ್ತಾದೀತೇ? ಅಲ್ಲಿಯೇ ತಾಸುಗಟ್ಟಲೆ ಹಾಗೆಯೇ ಬಿದ್ದುಬಿಟ್ಟಳು. ರಾತ್ರಿ ಎಷ್ಟೋ ಕಳೆದು ಸೀತಕ್ಕನಿಗೆ ಎಚ್ಚರ ತಿರುಗಿ ಬಂದಾಗ ಮಾತು ಹೊರಡುವಂತಾಗದಿದ್ದರೂ ಉದ್ದುದ್ದ ಶ್ವಾಸ ತೆಗೆಯುವಂತಾದಳು. ಅಲ್ಲಿಯೇ ಬಿದ್ದುಕೊಂಡಲ್ಲಿ...

'ಬಂದು ಬಾಗಿಲ ಬಡಿದವ ಮಾಳಪ್ಪ ಶ್ಯಾನುಭೋಗ' ಎಂದು ನೆನಪು ಬರುವಂತೆ ಆಯಿತು.

ಯಾರಿಗಾದರೂ ಹೇಳುವುದೆಂದರೂ ಹೊರಗೆ ಹೋಗುವುದಕ್ಕೆ ಧೈರ್ಯ ಎಲ್ಲಿ ಬರಬೇಕು? ಈಗ ನಾಯಿ ಬೇರೆ ಒಂದೇಸವನೆ ಮೇಲೆ ಮುಖ ಮಾಡಿ ಕೂಗುತ್ತಿದೆ. ಹಾಗೆಯೇ ಚೇತರಿಸಿಕೊಂಡು ಸೀತಕ್ಕ ಇದ್ದ ಎರಡೂ ಕಿಡಕಿಯ ಬಾಗಿಲನ್ನು ಮುಚ್ಚಿ ಬಂದಳು. ತನ್ನ ನೆರಳನ್ನೇ ಒಮ್ಮೆ ಚಿಮಣಿ ಬುರಡಿ ದೀಪದಲ್ಲಿ ಕಂಡು ಬೆಚ್ಚಿಬಿದ್ದಳು. ಬಾಗಿಲ ಸಂದಿನೊಳಗಿಂದ ತಿಂಗಳ ಬೆಳಕು ಹಾದುಬಂದರೂ ಭಯ, ಅವಳಿಗೆ, ಗಂಟಲು ಒಣಗಿ ಬಂದರೂ ಹೋಗಿ ನೀರು ಕುಡಿದು ಬರುವುದಕ್ಕೆ ಅವಳಿಗೆ ಎದೆಯ ನೀರು ಸಾಕಾಗಲಿಲ್ಲ. ಹಾಗೆಯೇ ಸಮೀಪದ ಬಳ್ಳಿಯ ಮೇಲೆ ತೂಗಾಡುತ್ತಿದ್ದ ಕಂಬಳಿಯನ್ನು ಎಳೆದುಕೊಂಡು ಹೊರಗೆ ನೋಡಬೇಕಾದುದಕ್ಕೆ ಅಂಜಿ ತಲೆಯ ತನಕ ಎಳೆದುಕೊಂಡು ಮಲಗಿಬಿಟ್ಟಳು. ಆದರೆ ನಿದ್ದೆ ಮಾತ್ರ ಆ ದಿನ ಅವಳ ಸುತ್ತ ಸುಳಿಯಲಿಲ್ಲ. ಕಣ್ಣಿಗೆ ಕಣ್ಣು ಹತ್ತುವಂತೆಯೂ ಇರಲಿಲ್ಲ. ಆ ರಾತ್ರಿಯೆಲ್ಲ ಜಾಗರಣೆ ಆಯಿತು. ಆ ಜಾಗರಣೆಯಲ್ಲಿ ಹೆದರಿಕೆಯೂ ಕಡಮೆ ಆಗುವಂತಿರಲಿಲ್ಲ.

'ನಾನು ನೋಡಿದ್ದು ದೆವ್ವ. ಮಾಳಪ್ಪನ ದೆವ್ವ ಅದು. ಭೂತ ಸಂಚಾರ ಮಾಡುವ ಶ್ರಾದ್ಧ ಪಕ್ಷ ಕಳೆದು ಬಹಳ ದಿನವಾಗಲಿಲ್ಲ. ಹಂ, ದೆವ್ವಬರುವ ಹೊತ್ತು ಅದೇ. ಸಂಜೆಯ ಹೊತ್ತು. ಮೂರು ಸಂಜೆ. ಆರು ತಾಸಿನ ಹಗಲು, ಮಧ್ಯರಾತ್ರಿ, ಇಂಥ ಹೊತ್ತಿಗೆ ಬರುವುದು ದೆವ್ವ!' ಮಗ್ಗಲು ಸರಿಸುತ್ತ ಮತ್ತಿಷ್ಟು ಮುಡಗಿಕೊಂಡು– 'ಎಷ್ಟು ಬಾರಿಗೆ ಬಡೆದಿದ್ದ ಕದ? ಮೂರು ಬಾರಿ? ಛೇ ಛೇ, ಒಂದೋ ಎರಡೋ ಬಾರಿ. ಹೌದು ಅಷ್ಟೇ. ದೆವ್ವ ಯಾವಾಗಲೂ ಕಾಡುವುದು ಗೊತ್ತಿದ್ದವರಿಗೇ. ಅಲ್ಲದೇ ನನ್ನ ಮನೆಗೆ ಬರುವುದಕ್ಕೆ ಕಾರಣವೂ ಇದೆ. ನನಗೆ ಅಳಿಯನನ್ನಾಗಿ ಮಾಡಿಕೊಳ್ಳುವ ಇಚ್ಛೆ ಇತ್ತು. ಅವನಿಗೂ ಹಾಗೆ ಒಪ್ಪಿಗೆ ಇದ್ದಿರಬೇಕು. ಸತ್ತರೂ ಪೂರ್ತಿಯಾಗದ ಅವನ ಹಂಬಲ ಇಲ್ಲಿಗೆ ಎಳದುತಂದಿರಬೇಕು– ಭೂತವಾಗಿ ನನಗಂತೂ ಉಸಿರೇ ಕಟ್ಟಿಹೋಯಿತು ಎಂದು ಮನಸ್ಸಿನಲ್ಲಿ ಆ ಸನ್ನಿವೇಶವನ್ನು ನೆನೆಸುತ್ತ ಕೋಳಿಯೊಂದು ಕೂಡ ಕೂಗಿಬಿಟ್ಟಿತು. ವಿಚಾರಗಳು ಈ ರೀತಿ ತಲೆಯಲ್ಲಿ ಸುಳಿಯುವಾಗ ಅವಕ್ಕೆಲ್ಲ ಹಿಡಿತ ತಪ್ಪಿದಂತಾಯಿತು. ವಿಚಾರಗಳು ಅಲ್ಲಿಯೇ ಕಡಿದುಕೊಂಡವು. ಅರಿಯದಂತೆ ರೆಪ್ಪೆಗಳು ಕೂಡಿಬಂದವು. ಸೀತಕ್ಕ ಈ ಪ್ರಪಂಚವನ್ನು ಅದರ ಸಂಬಂಧವನ್ನು ಕಡಿದುಕೊಂಡಳು– ಅಲ್ಲಿಯೇ ಬಿದ್ದ ಹಾಗೆಯೇ, ಆ ಕಂಬಳಿಯಲ್ಲಿ.

ಮುಂಜಾನೆ ಯಾರೋ ಬಾಗಿಲು ಬಡಿದು ಕರೆದಂತಾಗಿ ಸೀತಕ್ಕ ನಿದ್ದೆಯಿಂದ ತಿಕ್ಕಿ ತಿಕ್ಕಿ ಬಿದ್ದು ಎಚ್ಚೆತ್ತಳು. ಕಂಬಳಿಯ ಒಳಗೆ ಮುಸುಕಿನಲ್ಲಿ ಇದ್ದೇ ಕರೆಯುತ್ತಿರುವುದನ್ನು ದೃಢಪಡಿಸಿ ಧಡಬಡನೆ ಎದ್ದು ಕುಳಿತಳು. ಕಣ್ಣು ಕುಕ್ಕುವಷ್ಟು ದೊಡ್ಡ ಬೆಳಕಾಗಿತ್ತು. ಅರ್ಧ ಕನಸು ಅರ್ಧ ನಿದ್ದೆ. ಅರವು ಮರವು ಎಂಬ ಸ್ಥಿತಿಯಲ್ಲಿ ಜೋಲಿ ಹೊಡೆಯುತ್ತ ಬಂದು ಬಾಗಿಲು ಧೈರ್ಯವಾಗಿ ತೆಗೆದು ನೋಡಿದಾಗ ಬೀರಗೌಡನ ಹೆಂಡತಿ ಅವಲಕ್ಕಿಗೆ ಬಂದು ನಿಂತದ್ದು ಕಂಡಿತು. ಸೀತಕ್ಕನನ್ನು ನೋಡಿದೊಡನೆಯೇ ಅವಳು–

'ಯಾವ ಪರಿ ನಿದ್ದೆರಾಡೆನಗಿದೆನಗಿ ಶಾಕಾಯ್ತು. ತರೀ ಎಲ್ಡ ಸಿದ್ದೆ ಅವಲಕ್ಕಿ ಕೊಡಿ, ಕೂಚಾ ಇಂದೇ ಹೊತ್ರಮುಂಚೆ ಎದ್ದಕೊಂಡ ದಗದಿ ಕೊಡ್ತಬಿರ್‍ಯಾ' ಎಂದಳು.